ಕ್ರೇಗ್ ಕಲ್ಹಾನ್. ``ಇಂಟ್ರೊಡಕ್ಷನ್.'' ನ್ಯಾಷನಲಿಸಂ. ಲಂಡನ್: ಓಪನ್ ಯೂನಿವರ್ಸಿಟಿ ಪ್ರೆಸ್/ ಮಿನ್ನಪೊಲಿಸ್: ಯುನಿವರ್ಸಿಟಿ ಆಫ್ ಮಿನ್ನೆಸೋಟ ಪ್ರೆಸ್, ೧೯೯೭. ಪುಟ ೧-೮

## ಪ್ರಸ್ತಾವನೆ

ರಾಷ್ಟ್ರೀಯತೆ ಎನ್ನುವುದು ಕಳೆದ ೨೦೦ ವರ್ಷಗಳಿಂದ ದೊಡ್ಡ ಮಟ್ಟದ ಸುದ್ದಿಯಲ್ಲಿ ಕಾಣಿಸುತ್ತಾ ಕಣ್ಮರೆಯಾಗುತ್ತಲೇ ಇದೆ. ಯಥಾಪ್ರಕಾರ, ಈಗ ಇದು ಒಂದು ಕ್ಲೀಷೆಯೇ ಆಗಿಹೋಗಿದೆ. ಕ್ರಾಂತಿ ಮತ್ತು ಸ್ವಾತಂತ್ರ್ಯದ ಹೋರಾಟಗಳಲ್ಲಿ ರಾಷ್ಟ್ರೀಯತೆಯನ್ನು ಗುರುತಿಸಬಹುದು. ರಾಷ್ಟ್ರಗಳ ಅಸ್ತಿತ್ವ ಮತ್ತು ರಾಜಕೀಯ ಸ್ವಾಯತ್ತತೆಗಳನ್ನು ರಾಷ್ಟ್ರೀಯತಾ ಯೋಜನೆಗಳ ಗೆಲುವಿನ ಅಳತೆಗೋಲಾಗಿ ಪರಿಗಣಿಸಬಹುದಾಗಿದೆ. ಕೊನೆಯ ಪಕ್ಷ ಶ್ರೀಮಂತ ಪಾಶ್ಚಾತ್ಯ ದೇಶಗಳಲ್ಲಿ  ನಾಗರಿಕತ್ವ ಮತ್ತು ಪಾಸ್‌ಪೋರ್ಟ್‌ಗಳ ಆಯೋಜನೆ, ಚರಿತ್ರೆಯನ್ನು ನೋಡುವ ನಮ್ಮ ನೋಟ, ಸಿನಿಮಾ ಮತ್ತು ಸಾಹಿತ್ಯವನ್ನು ವಿಂಗಡಿಸುವ ನಮ್ಮ ರೀತಿ, ಒಲಿಂಪಿಕ್ ಆಟದಲ್ಲಿ ನಮ್ಮ ಸ್ಪರ್ಧೆ- ಇಲ್ಲೆಲ್ಲ ವ್ಯಾಪಿಸಿರುವ ರಾಷ್ಟ್ರೀಯತೆಯನ್ನು ನಿರ್ಲಕ್ಷಿಸಲು ನಾವು ಪ್ರಯತ್ನಿಸಿದೆವು. ರಾಷ್ಟ್ರೀಯತೆಯು ರಾಷ್ಟ್ರಗಳ ನಡುವಣ ಘರ್ಷಣೆ, ಸರಕಾರಿ ವ್ಯವಸ್ಥೆ ಅಥವಾ ಗಡಿರೇಖೆಗಳನ್ನು ಬದಲಿಸುವ ರೂಪದಲ್ಲಿ ಕಾಣಿಸಿದಾಗ ಮಾತ್ರ ನಾವು ರಾಷ್ಟ್ರೀಯತೆಯ ಕಡೆಗೆ ನಮ್ಮ ಗಮನವನ್ನು ಕೇಂದ್ರೀಕರಿಸಿದೆವು. ಇಂಥದ್ದೊಂದು ಸಾಮೂಹಿಕ ಕ್ರಿಯೆ ಬಹುತೇಕ ಹಿಂಸಾತ್ಮಕವಾಗಿ ಏರಿಳಿಯುತ್ತಾ ಸಾಗುವುದು ಕಾಣಿಸುತ್ತದೆ. ಪ್ರತಿಯೊಂದು ಇಳಿತದಲ್ಲೂ ವಿದ್ವಾಂಸರಿಗೆ ರಾಷ್ಟ್ರೀಯತೆ ಎನ್ನುವುದು ಭೂತಕಾಲದ ಸಮಸ್ಯೆ ಮತ್ತು ಅದು ಈಗ ತ್ವರಿತಗತಿಯಲ್ಲಿ ಮಸುಕುಗಾಗಿ ಹೋಗುತ್ತದೆ ಎಂಬ ಕಲ್ಪನೆಗೆ ಅವಕಾಶ ಮಾಡಿಕೊಡುತ್ತದೆ. ಆದರೆ ರಾಷ್ಟ್ರೀಯ ಘರ್ಷಣೆಯ ಹಿನ್ನೆಲೆಯಲ್ಲಿ ಸಾಮೂಹಿಕ ಅಸ್ಮಿತೆ ಮತ್ತು ಅಭಿಮಾನಗಳ ಗಹನ ನೆಲೆಗಳಿದ್ದು ಅದು ಮಾತಿನಲ್ಲಿ, ಆಲೋಚನೆಯಲ್ಲಿ ಮತ್ತು ಪ್ರಪಂಚವನ್ನು ನೋಡುವ ದೃಷ್ಟಿಯಲ್ಲಿ ರಾಷ್ಟ್ರೀಯತೆಯ ರೂಪ ಪಡೆದಿರುತ್ತದೆ, ಈ ಪ್ರಪಂಚವನ್ನು ನೋಡುವ ದೃಷ್ಟಿಯು ರಾಷ್ಟ್ರೀಯ ಮೂಲಭೂತ ಹಂತದಲ್ಲಿ ಹಾಗೂ ಅಂತಾರಾಷ್ಟ್ರೀಯ ಸಂಬಂಧಗಳ ನೆಲೆಯಲ್ಲಿ ನಿರ್ಮಾಣಗೊಂಡಿರುತ್ತದೆ.

೧೯೯೦ರಲ್ಲಿ ರಾಷ್ಟ್ರೀಯತೆ ಮತ್ತೆ ಪತ್ರಿಕೆಗಳ ಮುಖಪುಟದ ಸುದ್ದಿಯಾಗತೊಡಗಿತು. ಸೋವಿಯತ್ ಒಕ್ಕೂಟದ ವಿಘಟನೆಯು ಅದರ ಭೂತಕಾಲದ ಭಾಗವಾಗಿದ್ದ ಹತ್ತು ಹನ್ನೆರಡು ರಾಷ್ಟ್ರಗಳು ಸ್ವಾಯತ್ತತೆಯನ್ನು ಘೋಷಿಸುವಂತೆ ರಾಷ್ಟ್ರೀಯವಾದಿಗಳಿಗೆ ಪ್ರೇರಣೆ ನೀಡಿತು. ರಾಜಕೀಯ ಸರಹದ್ದುಗಳು ಜನಾಂಗೀಯ ಗಡಿರೇಖೆಗಳಿಗೆ ಹೊಂದಿಸುವ ಪ್ರಯತ್ನದಲ್ಲೇ ಅರ್ಮೇನಿಯನ್ನರು ಮತ್ತು ಅಝೇರಿನ್ನರು ನಗರ್ನೋ - ಕರಬಖ್‌ನಲ್ಲಿ ಹೋರಾಟ ನಡೆಸಿದರು. ಚೆಚನ್ ಬಂಡುಕೋರರು ರಷ್ಯಾದ ಮೇಲೇ ಮುಗಿಬಿದ್ದರು. ರಷ್ಯಾದ ಬಲಪಂಥೀಯ ರಾಷ್ಟ್ರೀಯವಾದಿಗಳು ರಾಷ್ಟ್ರದ ಈ

ಹಿಂದಣ ರಾಜ್ಯಗಳು ನಷ್ಟವಾಗುತ್ತಿರುವುದನ್ನು ಕುರಿತು ದೂರು ಹೇಳತೊಡಗಿದರು.

ರಾಷ್ಟ್ರೀಯತಾವಾದದ ಹೋರಾಟವು ಹಳೆಯ ಸೋವಿಯತ್ ಒಕ್ಕೂಟದ ಜತೆಗಿನ ಹೋರಾಟಕ್ಕೆ ಸೀಮಿತವಾಗಿರಲಿಲ್ಲ. ಸೆರ್ಬಿಯನ್, ಕ್ರೊವೇಷಿಯನ್ ಮತ್ತು ಬೋಸ್ನಿಯನ್ ನೆರೆಹೊರೆಯವರು ಒಂದು ಕಾಲದ ಯುಗೋಸ್ಲಾವಿಯಾದಲ್ಲಿ ಪರಸ್ಪರರನ್ನು ಕೊಲ್ಲುವುದಕ್ಕೆ ಆರಂಭಿಸಿದರು. ಅತ್ಯಂತ ಶಾಂತಿಯುತವಾಗಿಯೇ ಝೆಕೋಸ್ಲೊವಾಕಿಯಾ ರಾಜ್ಯವು ಝೆಕ್ ಗಣರಾಜ್ಯ ಮತ್ತು ಸ್ಲೊವಾಕಿಯಾ ದೇಶವಾಗಿ ವಿಭಜನೆಗೊಂಡಿತು. ಕೆಲವೇ ಶೇಕಡಾ ಮತಗಳ ಮಿತಿಯ ಅಂತರದಲ್ಲಿ ಕ್ಯುಬೆಕ್ ಪ್ರದೇಶವು ಕೆನಡಾದಿಂದ ಹೊರಬಂದು ಸ್ವತಂತ್ರವಾಯಿತು. ನಾರ್ವೇಯ ಮತದಾರರು ಯುರೋಪಿಯನ್ ಒಕ್ಕೂಟದ ಸದಸ್ಯತ್ವವನ್ನು ತಿರಸ್ಕರಿಸುವ ಮೂಲಕ ತಮ್ಮ ರಾಷ್ಟ್ರೀಯತೆಯ ಮನೋಭಾವನೆಯನ್ನು ವ್ಯಕ್ತಪಡಿಸಿದರು. ಯುರೋಪಿಯನ್ ಒಕ್ಕೂಟವು ಯುರೋಪ್ತನ ಎಂಬ ಹೊಸ ರಾಷ್ಟ್ರೀಯತೆಯನ್ನು ತನಗೆ ತಾನೇ ಪ್ರತಿಪಾದಿಸಲು ಆರಂಭಿಸಿದೆ ಎಂದು ಕೆಲವರು ವಾದಿಸಿದರು. ಅದು ಹೊಸ ಮಾದರಿಯ ರಾಷ್ಟ್ರ ನಿರ್ಮಾಣವಾಗಿತ್ತು. ಗ್ರೇಟ್ ಬ್ರಿಟನ್ ರಾಷ್ಟ್ರೀಯ ಸಾರ್ವಭೌಮತೆಯ ಹೆಸರಿನಲ್ಲಿ ತನ್ನ ಹಳೆಯ ವಸಾಹತಾದ ಹಾಂಗ್‌ಕಾಂಗ್ ಅನ್ನು ಚೀನಾಕ್ಕೆ ಸಮರ್ಪಿಸುವ ಮೂಲಕ ತನ್ನ ಹಕ್ಕು ಬಿಟ್ಟುಕೊಟ್ಟಿತು (ಹಾಂಗ್‌ಕಾಂಗ್ ನಾಗರಿಕರ ಸ್ವಯಂನಿರ್ಧಾರದ ರೀತಿಯಂಥದ್ದಾಗಿದ್ದರೂ ಕೂಡ). ಏಷ್ಯಾದ ಜತೆಗಿನ ವ್ಯಾಪಾರ ಅಥವಾ ವಲಸೆಯ ಮೇಲೆ ಕಠಿಣ ನಿರ್ಧಾರ ತಳೆಯುವುದರ ಮೂಲಕ ಅಮೆರಿಕದ ರಾಜಕಾರಣಿಗಳು ತಮ್ಮ ರಾಷ್ಟ್ರೀಯತೆಯ ಅರ್ಹತೆಯನ್ನು ಸಾಬೀತುಪಡಿಸುವುದಕ್ಕಾಗಿ ಪರಸ್ಪರ ಸ್ಪರ್ಧೆಗೆ ಇಳಿದರು. ಹಳೆಯ ಸಾಮ್ರಾಜ್ಯದ ಭಾಗವಾಗಿದ್ದ ದೇಶ ಈಗ ತನ್ನ ರಾಷ್ಟ್ರದ ಭಾಗವಾಗಬೇಕೆಂದು ಹಕ್ಕು ಪ್ರತಿಪಾದಿಸುತ್ತಾ ಇರಾಕ್ ಕುವೈತ್ ಅನ್ನು ಆಕ್ರಮಿಸಿತು; ರಾಷ್ಟ್ರದವಾಸಿಗಳಲ್ಲಿ ಅಲ್ಪಸಂಖ್ಯಾಕರಿಂದ ತುಂಬಿಕೊಂಡಿದ್ದ ಕುವೈತಿ ಆಡಳಿತದ ರಾಷ್ಟ್ರೀಯ ಸಾರ್ವಭೌಮತೆಯನ್ನು ವಿಶ್ವಸಂಸ್ಥೆಯು ಸಮರ್ಥಿಸಿತು. ಅದೇ ಮಧ್ಯಪ್ರಾಚ್ಯದಲ್ಲಿ, ಪಾಲೆಸ್ತೀನ್‌ನ ಬಹುದೀರ್ಘಕಾಲದ ಬೇಡಿಕೆಯಾಗಿದ್ದ ಸ್ವಾಯತ್ತ ರಾಷ್ಟ್ರೀಯ ಆಡಳಿತದ ಕನಸು ಕೊನೆಗೂ ಮೂರ್ತ ಫಲವನ್ನು ಕೊಡುವುದಕ್ಕೆ ಆರಂಭಿಸುವ ಹೊತ್ತಿನಲ್ಲೇ, ಉಗ್ರರಾಷ್ಟ್ರೀಯತೆಯ ಯಹೂದ್ಯನೊಬ್ಬನು ಇಸ್ರೇಲಿ ಪ್ರಧಾನಮಂತ್ರಿಯನ್ನು ಹತ್ಯೆ ಮಾಡಿದ. ಎರಿತ್ರಿಯಾ ದೇಶ ಮೂವತ್ತು ವರ್ಷಗಳ ರಾಷ್ಟ್ರೀಯತಾ ಹೋರಾಟದ ಅನಂತರ ಇಥಿಯೋಪಿಯಾದಿಂದ ಸ್ವತಂತ್ರವಾಯಿತು. ಅದು ಮೊದಲು ನಿಸ್ಸಂದಿಗ್ಧವಾಗಿ ಒಂದು ಸಾಮ್ರಾಜ್ಯವಾಗಿತ್ತು. ಕ್ರೌರ್ಯಭರಿತ ಕಮ್ಯೂನಿಸ್ಟ್ ಪ್ರಯತ್ನದ ಅನಂತರ ರಾಷ್ಟ್ರ ನಿರ್ಮಾಣ ಆಯಿತು. ಇದಕ್ಕೆ ಪ್ರತಿಯಾಗಿ ಇಥಿಯೋಪಿಯಾದ ಹೊಸ ಸರಕಾರ ರಾಷ್ಟ್ರೀಯತಾವಾದಿ ಬಂಡುಕೋರತನವನ್ನು ಮುಂಚಿತವಾಗಿಯೇ ಮನಗಂಡು ಸ್ವಾಯತ್ತತೆಯ ಹಕ್ಕನ್ನು ಸಾಂವಿಧಾನಿಕವಾಗಿ ನೀಡುವ ಭರವಸೆ ನೀಡಿತು.

ವೈವಿಧ್ಯಮಯವಾದ ಮುಖ್ಯರಾಷ್ಟ್ರೀಯತೆಗಳಿಗೆ ಇಥಿಯೋಪಿಯಾದಿಂದ ಸಿಡಿದು ದೂರ ಆಗುವ ಆಯ್ಕೆಯ ಭರವಸೆಯನ್ನೂ ನೀಡಿತು. ತನ್ಮೂಲಕ ಬಂಡಾಯ ಶಮನಕ್ಕೆ ಕ್ರಮಕೈಗೊಂಡಿತು. ಇನ್ನೂ ದಕ್ಷಿಣದಲ್ಲಿ, ಆಫ್ರಿಕಾದ ರಾಷ್ಟ್ರೀಯ ಕಾಂಗ್ರೆಸ್ ಬಹುಸಂಖ್ಯಾತರ ಆಡಳಿತವನ್ನು ತಂದಿತು. ಆದರೆ ಸುಡಾನ್‌ನಲ್ಲಿ, ರಾಷ್ಟ್ರೀಯ ಐಕ್ಯದ ಹೆಸರಿನಲ್ಲಿ ಔತ್ತರೇಯರು ದಾಕ್ಷಿಣಾತ್ಯ ಪ್ರತ್ಯೇಕತಾವಾದಿಗಳನ್ನು ಕೊಂದು ಹಾಕಿದರು.

ರಾಷ್ಟ್ರೀಯತೆ ಎಂಬ ನಿರಂತರ ಬಳಕೆಯ ನಾಣ್ಯದ ಪ್ರಬಲ ಪುರಾವೆಗಳಾದ ಇಂತಹ ನಿದರ್ಶನಗಳು ಮುಂದುವರಿಯುತ್ತಲೇ ಹೋಗುತ್ತದೆ. ಒಂದರ್ಥದಲ್ಲಿ ಇವೆಲ್ಲ ದಾರಿತಪ್ಪಿಸುವ ಹವಣಿಕೆ. ಇವುಗಳನ್ನು ಕೇವಲ ಹಿಂಸಾತ್ಮಕ ಹೋರಾಟಗಳೆಂದು ಭಾವಿಸಿದರೆ, ರಾಷ್ಟ್ರೀಯತೆ ಎನ್ನುವುದು ಬಗೆಹರಿಸಬಹುದಾದ ಸರಳ ಸಮಸ್ಯೆಯಾಗಿದೆ ಎಂದು ಭಾವಿಸಬೇಕಾಗುತ್ತದೆ. ಗಡಿರೇಖೆಗಳನ್ನು ಗುರುತಿಸಿದರೆ ಮತ್ತು ಜನಪ್ರಿಯ ಸಾರ್ವಭೌಮತೆಯನ್ನು ಸ್ಥಾಪಿಸಿದರೆ ಮಾಯವಾಗುವ ಸಮಸ್ಯೆ ಎಂದು ಯೋಚಿಸುವಂತೆ ಮಾಡುತ್ತದೆ. ಸರಹದ್ದುಗಳು ಮತ್ತು ಜನಪ್ರಿಯ ಸಾರ್ವಭೌಮತೆಗಳು ಸ್ವತಃ ರಾಷ್ಟ್ರೀಯತೆಯ ವಾಗ್ವಾದದ ಭಾಗಗಳಾಗಿದ್ದು, ಅವುಗಳ ಮೂಲಕ ಆಧುನಿಕ ಜಗತ್ತಿಗೆ ಕಾಲ್ಪನಿಕ ವಿನ್ಯಾಸ ಮತ್ತು ಪ್ರಾಯೋಗಿಕ ಸಂಘಟನೆಯನ್ನು ನಾವು ನೀಡುತ್ತೇವೆ ಎಂಬ ವಿಚಾರ ಮರೆಯುವಂತಾಗುತ್ತದೆ.

ರಾಷ್ಟ್ರೀಯತೆ ಎನ್ನುವುದು ಸಮಸ್ಯೆಗಳ ಮತ್ತು ಸಂಘರ್ಷಗಳ ಸಂದರ್ಭದಲ್ಲಿ ಮಾತ್ರ ಮುಖ್ಯ ಅಲ್ಲ. ಅದು ಆಧುನಿಕ ಯುಗದಲ್ಲಿ ಸಾಮೂಹಿಕ ಅಸ್ಮಿತೆಯ ಆಧಾರವಾಗಿರುತ್ತದೆ; ಕಳೆದ ಎರಡು ನೂರು ವರ್ಷಗಳಷ್ಟು ಹಿಂದಣ ಆಳ್ವಿಕೆ ಹೊಂದಿರುವ ನಿರ್ದಿಷ್ಟ ಸ್ವರೂಪದ ದೇಶ ಕೂಡಾ ಆಗಿರುತ್ತದೆ. ನಿಜವಾಗಿಯೂ ರಾಷ್ಟ್ರೀಯತೆ ಎನ್ನುವುದು ರಾಜಕೀಯದ ವಿಚಾರ ಮಾತ್ರವಲ್ಲ ಅದು ಸಾಂಸ್ಕೃತಿಕ ಮತ್ತು ವೈಯಕ್ತಿಕ ಅಸ್ಮಿತೆ ಕೂಡಾ ಹೌದು. ರಾಷ್ಟ್ರಗಳ ವಾಗ್ವಾದವು ಮುಖ್ಯವಾಗಿ ಆಕರ್ಷಣೆ ಮತ್ತು ಗುರುತಿಸುವಿಕೆಯನ್ನು ಒಳಗೊಂಡಿದೆ. ಆದರೆ ದೇಶಗಳಿಗೆ ಸಂಬಂಧಿಸಿದಂತೆ ಅದು ಒಂದು ಬಗೆಯ ಕುಟುಂಬದ ಸಂಬಂಧವನ್ನು ಹೊಂದಿರುತ್ತದೆ. ದೇಶವನ್ನು ವಿಚಾರ ಮತ್ತು ಆಸಕ್ತಿಗಳಿಗೆ ಸಂವಾದಿಯಾದ ನುಡಿಗಟ್ಟು ಎಂದೇ ಭಾವಿಸಬೇಕಾಗಿದೆ. ರಾಷ್ಟ್ರೀಯತೆಗೆ ಭಾಗಶಃ ಭಾವುಕವಾದ ಶಕ್ತಿ ಇದೆ. ಯಾಕೆಂದರೆ ಅದು ನಾವು ಯಾರು ಎಂದು ಬಿಂಬಿಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಅಂತಹ ಶಕ್ತಿಯೇ ಕಲಾವಿದರಿಗೆ ಮತ್ತು ಸಂಗೀತ ಸಂಯೋಜಕರಿಗೆ ಪ್ರೇರಣೆ ನೀಡುತ್ತದೆ. ಅದು ನಮ್ಮನ್ನು ಚರಿತ್ರೆಯ ಜತೆಗೆ ಜೋಡಿಸುತ್ತದೆ (ಆ ಮೂಲಕ ಶಾಶ್ವತದ ಜತೆಗೆ ಬಂಧಿಸುತ್ತದೆ).

ನ್ಯಾಷನಲ್ ಆರ್ಟ್ ಕಲೆಕ್ಷನ್ ಫಂಡ್ ಸಂರಕ್ಷಿಸಿರುವ `ಎ ಲಂಡನ್ ಎಕ್ಸಿಹಿಬಿಷನ್ ಆಫ್ ವರ್ಕ್ಸ್' ಎಂಬ ಕೃತಿಯನ್ನು ಅವಲೋಕಿಸಿ (ಬಹುತೇಕ ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲಘಟ್ಟದಲ್ಲಿ ರೂಪುಗೊಂಡ

`ಸ್ಪ್ರಿಂಗ್‌ಟೈಮ್ ಆಫ್ ನೇಷನ್ಸ್'): `ಇಲ್ಲಿ ಸರಳವಾಗಿ ಕೇಂದ್ರ ಪ್ರಶ್ನೆಯೊಂದನ್ನು ಕೇಳಿಕೊಳ್ಳಿ. ಅದೇನೆಂದರೆ ಪ್ರಾಚೀನ ರಾಷ್ಟ್ರವೊಂದಕ್ಕೆ ತನ್ನ ಗತಕಾಲದ ನಿರಂತರ ಅಸ್ತಿತ್ವ ಮತ್ತು ಅದರ ಸಂಸ್ಕೃತಿಯ ಸಾತತ್ಯಕ್ಕೆ ಅಗತ್ಯವಾದ ಕಲಾಕೃತಿಗಳನ್ನು ಸಂರಕ್ಷಿಸುವುದಕ್ಕೆ ಬೇಕಾದ ಆರ್ಥಿಕ ಸಂಪನ್ಮೂಲಗಳಾಗಲೀ, ಪ್ರಬಲ ಇಚ್ಛಾಶಕ್ತಿಯಾಗಲೀ ಇರುತ್ತದೆಯೇ' (ಮೆಲಿಕಿಯನ್ ೧೯೯೭: ೭). ಇನ್ನೂ ಸರಳವಾಗಿ ಹೇಳಬೇಕೆಂದರೆ, ಫಾಕ್‌ಲ್ಯಾಂಡ್ ಯುದ್ಧಸಂದರ್ಭದಲ್ಲಿ (ಸಂಘರ್ಷಕ್ಕೆ ಅದರ ಇಂಗ್ಲಿಷ್ ಹೆಸರು ಕೊಡಬೇಕೆಂದರೆ), ನಾನು ನನ್ನ ಆಕ್ಸ್‌ಫರ್ಡ್ ಕಾಲೇಜಿನ ಕೆಲಸಗಾರ ಹಾಗೂ ಉಸಿರಾಟದ ತೊಂದರೆಯಾದ ಎಂಫಿಸೆಮಾ ಕಾರಣದಿಂದ ಆಸ್ಪತ್ರೆಯ ಮರಣಶಯ್ಯೆಯಲ್ಲಿದ್ದ ಫ್ರಾಂಕ್ ಹ್ಯಾರಿಸ್‌ರನ್ನು ಭೇಟಿ ಮಾಡಿದೆ. `ಜನ ಸಾಯುತ್ತಾರೆ. ಆದರೆ ಇಂಗ್ಲೆಂಡ್ ಯಾವತ್ತೂ ಉಳಿಯುತ್ತದೆ' ಎಂದು ಅವರು ಹೇಳಿದರು.

ರಾಷ್ಟ್ರೀಯತೆ ಎನ್ನುವುದು ಬಹುಮುಖೀ ವಿನ್ಯಾಸಗಳಲ್ಲಿ ಕಾಣಿಸಿಕೊಳ್ಳುತ್ತದೆ. ಕೆಲವು ದಯಾರ್ದ್ರವಾದ ಮರುಭರವಸೆ ನೀಡುವ ರೀತಿಯವುಗಳಾದರೆ, ಉಳಿದವು ಭಯವಿಹ್ವಲಗೊಳಿಸುವ ವಿನ್ಯಾಸಗಳಾಗಿವೆ. ಸಮಾಜ ವಿಜ್ಞಾನಿಗಳು ಕೆಲ ಸಂದರ್ಭಗಳಲ್ಲಿ ಒಳ್ಳೆಯ ರಾಷ್ಟ್ರೀಯತೆ ಅಥವಾ ರಾಷ್ಟ್ರಾಭಿಮಾನ ಮತ್ತು ಕೆಟ್ಟ ರಾಷ್ಟ್ರೀಯತೆ ಅಥವಾ ರಾಷ್ಟ್ರೀಯ ಅಂಧಾಭಿಮಾನ ಎಂದು ವಿಶ್ಲೇಷಿಸುವ ಆಕರ್ಷಣೆಗೆ ಒಳಗಾಗುತ್ತಾರೆ: ಇವು ಸಂಪೂರ್ಣವಾಗಿ ವಿಭಿನ್ನ ಸಾಮಾಜಿಕ ವಿದ್ಯಾಮಾನಗಳಾಗಿದ್ದರೂ ಕೂಡ. ಹೀಗಿದ್ದರೂ ಇದು ಪ್ರತಿಯೊಂದರ ಗ್ರಹಿಕೆಯನ್ನು ಇನ್ನಷ್ಟು ಜಟಿಲವಾಗಿಸುತ್ತದೆ ಮತ್ತು ಅವುಗಳ ಸಮಾನಾಂಶಗಳನ್ನು ಅಸ್ಪಷ್ಟಗೊಳಿಸುತ್ತದೆ. ರಾಷ್ಟ್ರೀಯ ಅಸ್ಮಿತೆ ಮತ್ತು ನಿಷ್ಠೆಗಳ ಸಕಾರಾತ್ಮಕ ಮತ್ತು ನಕಾರಾತ್ಮಕ ಅಭಿವ್ಯಕ್ತಿಗಳೆಲ್ಲ ರಾಷ್ಟ್ರೀಯತೆಯ ಸಾಮಾನ್ಯ ವಾಗ್ವಾದದಿಂದ ರೂಪುಗೊಂಡವುಗಳೇ ಆಗಿವೆ. ಪ್ರತಿಯೊಂದಕ್ಕೂ ಅವುಗಳ ಉಗಮ ಮತ್ತು ವಿನ್ಯಾಸಕ್ಕೆ ಜಾಗತಿಕ, ಅದರಲ್ಲೂ ಅಂತರರಾಷ್ಟ್ರೀಯ ಸಿದ್ಧಾಂತಗಳು ಸಹಾಯ ಮಾಡಿವೆ ಎನ್ನುವುದನ್ನು ನೋಡದೆ ಇವುಗಳ ಪ್ರತಿಯೊಂದು ನಿರ್ದಿಷ್ಟ ಪ್ರಕರಣಗಳನ್ನೂ ಸಂಪೂರ್ಣವಾಗಿ ಅರ್ಥೈಸುವುದು ಸಾಧ್ಯವಾಗುವುದಿಲ್ಲ. ರಾಷ್ಟ್ರೀಯತಾ ಚಳವಳಿಗಳು, ರಾಷ್ಟ್ರೀಯತಾ ಆಂತರಿಕ ಯೋಜನೆಗಳು, ಸಾಹಿತ್ಯ ಮತ್ತು ಕಲೆಗಳಲ್ಲಿ ರಾಷ್ಟ್ರೀಯತಾ ಪರಂಪರೆ ಮತ್ತು ಸಾಮಾನ್ಯ ವ್ಯಕ್ತಿಗಳ ದೈನಿಕ ಬದುಕಿನಲ್ಲಿ ಈ ಪರಿಕಲ್ಪನೆಗಳು ಎಲ್ಲಿ ಮತ್ತು ಹೇಗೆ ಸೂಕ್ತ ಎಂದೆನಿಸುತ್ತವೆ ಎಂಬೆಲ್ಲ ವಿಚಾರಗಳ ಕಡೆಗೆ ಇದು ಸಾಗುತ್ತದೆ. ಮಿಶೆಲ್ ಫುಕೋ (೧೯೬೯, ೧೯೭೭; ಬ್ರೆನ್ನನ್ ೧೯೯೦ ಅನ್ನೂ ನೋಡಿ) ಉಳಿದ ವಿಚಾರಗಳ ಜತೆಗೆ ರಾಷ್ಟ್ರೀಯತೆ ಎನ್ನುವುದನ್ನು `ವಾಗ್ವಾದಕ್ಕೆ ಸಂಬಂಧಿಸಿದ ರಚನೆ', ಅದು ನಮ್ಮ ಪ್ರಜ್ಞೆಯನ್ನು ರೂಪಿಸುವ ಮಾತಿನ ರೀತಿ. ಅನೇಕ ವಿವಾದಗಳನ್ನು, ಪ್ರಶ್ನೆಗಳನ್ನೂ ಹುಟ್ಟುಹಾಕುತ್ತಿರುವುದರಿಂದ ಇದು ಹೆಚ್ಚು ಸಮಸ್ಯಾತ್ಮಕ ವಿಚಾರ ಕೂಡ. ನಮ್ಮನ್ನು ಮತ್ತೆ ಮತ್ತೆ ಮಾತಿನ ಗುಂಗಿನಲ್ಲೇ ಇರುವಂತೆ

ನೋಡಿಕೊಳ್ಳುತ್ತದೆ. ಅದರ ಬಗ್ಗೆ ಹೇಗೆ ಯೋಚಿಸಬೇಕೆಂಬ ಚರ್ಚೆಯನ್ನೂ ಹುಟ್ಟುಹಾಕುತ್ತಲೇ ಇರುತ್ತದೆ ಎಂದು ಕರೆದಿದ್ದ.

ಭಾಗವಹಿಸುವವನು ನಿರ್ದಿಷ್ಟ ಪರಿಭಾಷೆಯನ್ನು ಬಳಸುತ್ತಾನೆಯೇ ಎನ್ನುವುದು ಮಾತ್ರ ಇಲ್ಲಿನ ಸಮಸ್ಯೆ ಅಲ್ಲ(ಗ್ರೀನ್‌ಫೀಲ್ಡ್ ೧೯೯೨). ಇಲ್ಲಿ ಭಾಗವಹಿಸುವವರ ಭಾಷಣ, ಮಾತಿನ ರೀತಿ, ಇತರ ಘಟನೆ ಮತ್ತು ಕ್ರಿಯೆಗಳ ಸಂದೇಶ ಒಯ್ಯುವ ಒಂದು ವಿಧದ ಭಾಷೆ ಎಲ್ಲವೂ ಸಮಸ್ಯೆಯೇ ಆಗುತ್ತದೆ. ಇತರ ರೀತಿಯ ಮಾತಿನ ರೀತಿ ಇಲ್ಲವೇ ವರ್ತನೆಯನ್ನು ಸ್ವೀಕರಿಸಲಾಗುತ್ತದೆಯೇ ಅಥವಾ ನಿರಾಕರಿಸಲಾಗುತ್ತದೆಯೇ ಅಥವಾ ನಿರ್ದಿಷ್ಟ ಪರಿಣಾಮವನ್ನು ನಿರೀಕ್ಷಿಸಲಾಗುತ್ತಿದೆಯೇ ಎನ್ನುವುದೂ ಇಲ್ಲಿನ ಸಮಸ್ಯೆ. ಇವೆಲ್ಲ ಇತರರು ಗುರುತಿಸುವಂತೆ ಇದೆಯೋ ಎನ್ನುವುದನ್ನೂ ಕೂಡ ಗಮನಿಸಬೇಕಾಗುತ್ತದೆ. ಉದಾಹರಣೆಗೆ ಕ್ಯೂಬೆಕಾಯ್ಸ್ ಅನುಯಾಯಿಗಳು ರಾಷ್ಟ್ರೀಯತೆಯ ವಾಗ್ರೂಪಗಳನ್ನು ಬಳಸುವಾಗ ಅವರು ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯತೆಗಳ ಧ್ವನಿತವಾದ ಉಲ್ಲೇಖಗಳನ್ನು ತರುತ್ತಾರೆ. ಅಮೆರಿಕ ಅಥವಾ ಫ್ರಾನ್ಸ್ ಜತೆ ಸೇರುವಂತೆ ಪ್ರತಿಪಾದಿಸುವವರನ್ನು ತಡೆಯುತ್ತಾರೆ. ಅವರು ತಮ್ಮದು ನ್ಯಾಯಯುತವಾಗಿ ಸ್ವಾಯತ್ತತೆ ಸಾಧ್ಯತೆಯ ದೇಶ ಎಂದು ಹಕ್ಕು ಪ್ರತಿಪಾದಿಸುತ್ತಾರೆ.

ರಾಷ್ಟ್ರ ಎಂದು ಗುರುತಿಸಬೇಕಿದ್ದರೆ ಅದಕ್ಕೆ ಸಾಮಾಜಿಕ ಭಾವೈಕ್ಯ ಇರಬೇಕಾಗುತ್ತದೆ. ಪ್ರತಿಪಾದಿತ ರಾಷ್ಟ್ರದ ಸದಸ್ಯರಲ್ಲಿ ಒಂದು ಬಗೆಯ ಸಮಗ್ರತೆ ಇರಬೇಕಾಗುತ್ತದೆ. ಒಂದು ಬಗೆಯ ಸಾಮೂಹಿಕ ಅಸ್ಮಿತೆ ಇರಬೇಕಾಗುತ್ತದೆ. ಅದನ್ನು ಅಲ್ಲಿನ ಸದಸ್ಯರೆಲ್ಲರೂ ಮನ್ನಿಸಬೇಕಾಗುತ್ತದೆ. ಸಮಗ್ರ ಸದಸ್ಯ ಎಂಬ ನೆಲೆಯ ವೈಯಕ್ತಿಕ ಅಸ್ಮಿತೆಯ ಪ್ರಜ್ಞೆಯೂ ಇರಬೇಕಾಗುತ್ತದೆ. ಆದರೆ ಸಾಮಾಜಿಕ ಭಾವೈಕ್ಯ ಮತ್ತು ಸಾಮೂಹಿಕ ಅಸ್ಮಿತೆ ಎನ್ನುವುದು ವಿವಿಧ ಬಗೆಯ ಗುಂಪುಗಳಲ್ಲಿ ಅಸ್ತಿತ್ವದಲ್ಲಿರುವುದು ಸಾಧ್ಯ. ಕುಟುಂಬದಿಂದ ತೊಡಗಿ ವ್ಯಾಪಾರ ಸಂಸ್ಥೆಗಳ ನೌಕರರವರೆಗೆ ಇಲ್ಲವೇ ಸಾಮ್ರಾಜ್ಯಶಾಹಿ ಸೇನೆಯವರೆಗೆ ಇಂತಹ ಗುಂಪುಗಳಿರುತ್ತವೆ. ಇವುಗಳೆಲ್ಲ ಜನಸಂಖ್ಯೆಯನ್ನು ರಾಷ್ಟ್ರ ಎಂದು ಕರೆಯುವುದಕ್ಕೆ ಇರುವ ಕನಿಷ್ಠ ಸ್ಥಿತಿಗಳಾಗಿವೆ, ಆದರೆ ಇವು ರಾಷ್ಟ್ರದ ನಿರ್ವಚನದಿಂದ ದೂರವೇ ಉಳಿಯುತ್ತವೆ. ಸಾಮಾಜಿಕ ಭಾವೈಕ್ಯ ಮತ್ತು ಸಾಮೂಹಿಕ ಅಸ್ಮಿತೆಯ ಜತೆಗೆ ಒಂದು ಸಮುದಾಯವನ್ನು ರಾಷ್ಟ್ರ ಎಂದು ಕರೆಯಬೇಕಾದರೆ ಯಾವ ಹೆಚ್ಚುವರಿ ಲಕ್ಷಣಗಳು ಆದರ್ಶವಾಗಿ ಇರಬೇಕಾಗುತ್ತವೆ?

ಇಲ್ಲೇ ವಾಗ್ವಾದಕ್ಕೆ ಸಂಬಂಧಿಸಿದ ರಾಷ್ಟ್ರ ಎಂಬ ಪರಿಕಲ್ಪನೆ ಕಾಣಿಸಿಕೊಳ್ಳುತ್ತದೆ. ಸಾಮಾಜಿಕ ಭಾವೈಕ್ಯ, ಸಾಮೂಹಿಕ ಅಸ್ಮಿತೆ ಮತ್ತು ಇದಕ್ಕೆ ಸಂಬಂಧಿಸಿದ ಪ್ರಶ್ನೆಗಳೆಲ್ಲ (ರಾಜಕೀಯ ಅಧಿಕೃತತೆಯಂತಹ ಪ್ರಶ್ನೆಗಳು) ರಾಷ್ಟ್ರೀಯತೆಯ ಸ್ವ ಗ್ರಹಿಕೆ ಮತ್ತು ಅನ್ಯ ಗ್ರಹಿಕೆಯ ವಿಚಾರದಲ್ಲಿ ಮುಖ್ಯಪಾತ್ರ ವಹಿಸುತ್ತವೆ. ಇದೇ ಅರ್ಥದಲ್ಲಿ ಬೆನೆಡಿಕ್ಟ್ ಆ್ಯಂಡರ್ಸನ್ ಅವರು

ರಾಷ್ಟ್ರಗಳನ್ನು `ಕಲ್ಪಿತ ಸಮುದಾಯಗಳು' ಎಂದು ವಿವರಿಸಿದ್ದಾರೆ. ಅವರು ಹೇಳುವಂತೆ, `ಮುಖಾಮುಖಿ ಭೇಟಿಯಾಗುವ ಪ್ರಾಥಮಿಕ ಹಂತದ ಗ್ರಾಮಗಳಿಗಿಂತ ಹಿರಿದಾದ ಎಲ್ಲ ಸಮುದಾಯಗಳು (ಮತ್ತು ಬಹುಶಃ ಇಂತಹ ಸಮುದಾಯಗಳೂ) ಕಲ್ಪಿತಗಳೇ ಆಗಿವೆ. ಸಮುದಾಯಗಳನ್ನು ವಿಂಗಡಿಸಿನೋಡಬೇಕಾದದ್ದು ಅವುಗಳ ನಕಲಿತನ-ಸಾಚಾತನಗಳ ಮೂಲಕ ಅಲ್ಲ, ಬದಲಾಗಿ ಅವುಗಳನ್ನು ಯಾವ ರೀತಿಯಲ್ಲಿ ಕಲ್ಪಿಸಿಕೊಳ್ಳಲಾಗಿದೆ ಎನ್ನುವ ನೆಲೆಯಲ್ಲಿ ವಿಭಜಿಸಬೇಕಾಗಿದೆ' (೧೯೯೧:೬). ಹೌದು ನಿಜಾರ್ಥದಲ್ಲಿ ಸಮುದಾಯಗಳನ್ನು ವಿಂಗಡಿಸುವುದಕ್ಕೆ ಇನ್ನೂ ಇತರ ಮಾದರಿಗಳಿವೆ. ಅವುಗಳ ಮಟ್ಟ, ಆಡಳಿತಾತ್ಮಕ ಸಂಘಟನೆಯ ವ್ಯಾಪ್ತಿ, ಆಂತರಿಕ ಸಮಾನತೆಯ ಮಟ್ಟ ಹೀಗೆ ಅನೇಕ ಬಗೆಯ ವಿಂಗಡಣೆಯ ಮಾನದಂಡಗಳಿವೆ. ಆದರೆ ಇಲ್ಲಿ ನಮಗೆ ಇರುವ ಮೊದಲ ಕೆಲಸ ಎಂದರೆ, ರಾಷ್ಟ್ರೀಯತೆಯ ಜತೆಗೆ ಸಂಬಂಧ ಹೊಂದಿದ ಸಾಮಾಜಿಕ ಭಾವೈಕ್ಯ ಮತ್ತು ಸಾಮೂಹಿಕ ಅಸ್ಮಿತೆಯ ನಿರ್ದಿಷ್ಟ 'ಕಲ್ಪಿತ' ರೂಪವನ್ನು ಕೆಲಮಟ್ಟಿಗೆ ಗ್ರಹಿಸಿಕೊಳ್ಳುವುದು.

ರಾಷ್ಟ್ರದ ವಾಗ್ರೂಪದಲ್ಲಿ ಹೇಳಲಾದ ಲಕ್ಷಣಗಳು ಮುಖ್ಯವೆಂದು ಕಾಣಿಸುತ್ತವೆ: ಅವುಗಳಲ್ಲಿ ಯಾವುದೂ ಸಂಕ್ಷಿಪ್ತವಾಗಿ ನಿರ್ದಿಷ್ಟವಾಗಿರದಿದ್ದರೂ ಕೂಡ. ಇವುಗಳಲ್ಲಿ ಪ್ರತಿಯೊಂದೂ ಗರಿಷ್ಠಮಟ್ಟದಲ್ಲಿ ಇಲ್ಲವೇ ಕನಿಷ್ಠಮಟ್ಟದಲ್ಲಿ ಯಾವುದೇ ದೇಶದಲ್ಲಿ ಕಾಣಿಸುತ್ತದೆ. ಈ ವಿನ್ಯಾಸವು ಅವುಗಳ ಹಿಡಿತದಿಂದ ರೂಪುಗೊಂಡಿದೆ ಎನ್ನುವುದು ಇಲ್ಲಿ ಅತ್ಯಂತ ಮುಖ್ಯ ವಿಚಾರ:

1. ರಾಷ್ಟ್ರ ಎಂದರೆ ಭೂಪ್ರದೇಶದ ಗಡಿರೇಖೆ, ಜನಸಂಖ್ಯೆ, ಅಥವಾ ಎರಡೂ.
2. ಅವಿಭಾಜಕತ್ವ- ರಾಷ್ಟ್ರ ಎಂಬುದು ಒಂದು ಸಮಗ್ರ ಘಟಕ ಎಂಬ ಭಾವನೆ.
3. ಸಾರ್ವಭೌಮತೆ, ಅಥವಾ ಕನಿಷ್ಠ ಸಾರ್ವಭೌಮತೆಯ ಆಕಾಂಕ್ಷೆ, ಹಾಗೆಯೇ ಇತರ ದೇಶಗಳ ಜತೆಗೆ ಔಪಚಾರಿಕ ಸಮಾನತೆ, ಸಾಮಾನ್ಯವಾಗಿ ಸ್ವಾಯತ್ತ ಮತ್ತು ಸರ್ವಮಾನ್ಯ ಸ್ವಾವಲಂಬಿ ರಾಷ್ಟ್ರ.
4. ಅಧಿಕೃತತೆಯನ್ನು ಕುರಿತ ಉನ್ನತ ಭಾವನೆ. ಅಂದರೆ ಜನಮನದ ಬೆಂಬಲ ಇದ್ದರೆ ಮಾತ್ರ ಸರ್ಕಾರ ಎಂಬ ಆಲೋಚನೆ ಅಥವಾ ಜನರ ಅಥವಾ ರಾಷ್ಟ್ರದ ಹಿತವನ್ನು ರಕ್ಷಿಸಿದರೆ ಮಾತ್ರ ಸರ್ಕಾರ ಇದೆ ಎಂಬ ಭಾವನೆ.
5. ಸಾಮೂಹಿಕ ವಿಚಾರದಲ್ಲಿ (ಯುದ್ಧ ಅಥವಾ ನಾಗರಿಕ ಚಟುವಟಿಕೆಗಳಿಗೇ ಆಗಿರಲಿ) ಜನಭಾಗಿತ್ವ-ರಾಷ್ಟ್ರೀಯತೆಯ ಸದಸ್ಯತ್ವದ ಆಧಾರದಲ್ಲಿ ಜನಸಂಚಲನ.
6. ನೇರ ಸದಸ್ಯತ್ವ. ಇದರಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ತತ್‌ಕ್ಷಣವೇ ರಾಷ್ಟ್ರವೊಂದರ ಭಾಗ ಎಂದೇ ಭಾವಿಸಲಾಗುತ್ತದೆ. ಆ ಹಿನ್ನೆಲೆಯಲ್ಲಿ ಇವರೆಲ್ಲ ಇತರ ಸದಸ್ಯರಂತೆ ಸಮಾನ ಎಂದು ತಿಳಿಯಲಾಗುತ್ತದೆ.

7. ಸಂಸ್ಕೃತಿ, ಅಂದರೆ ಭಾಷೆ, ಸಮಾನ ನಂಬಿಕೆಗಳು, ಮೌಲ್ಯಗಳು, ಹವ್ಯಾಸದ ಆಚರಣೆಗಳ ಮಿಶ್ರಣ.
8. ಲೌಕಿಕವಾಗಿ ಪ್ರಾಚೀನ ಕಾಲದಿಂದಲೇ ರಾಷ್ಟ್ರದ ಅಸ್ತಿತ್ವ ಇದೆ ಎಂಬ ಭಾವನೆ. ಇದರಲ್ಲಿ ಗತದ ಮತ್ತು ಭವಿತವ್ಯದ ತಲೆಮಾರುಗಳು ಮತ್ತು ಚರಿತ್ರೆ ಒಳಗೊಳ್ಳುತ್ತವೆ.
9. ಸಾಮಾನ್ಯ ಮೂಲ ಅಥವಾ ಕುಲದ ಲಕ್ಷಣಗಳು.
10. ನಿರ್ದಿಷ್ಟ ಭೂಪ್ರದೇಶದ ಜತೆಗೆ ವಿಶೇಷ, ಪವಿತ್ರ ಇಲ್ಲವೇ ಚಾರಿತ್ರಿಕ ಸಂಬಂಧಗಳು.

ಮತ್ತೊಮ್ಮೆ ಗಮನಿಸಿ, ಇವೆಲ್ಲ ರಾಷ್ಟ್ರದ ವಾಗ್ರೂಪಗಳ ಲಕ್ಷಣಗಳೇ ಆಗಿವೆ. ರಾಷ್ಟ್ರಗಳನ್ನು ನಿರ್ವಚಿಸುವ ಸಾಮಾನ್ಯ ವಿಚಾರಗಳೇ ಆಗಿವೆ. ರಾಷ್ಟ್ರಗಳು ನಿಜವಾಗಿಯೂ ಸಾರ್ವಭೌಮತೆ ಗಳಿಸಲು ಸಮರ್ಥವಾಗಿವೆಯೇ, ಸಮಗ್ರತೆಯನ್ನು ಕಾಪಾಡುವುದರ ಮೂಲಕ ಆಂತರಿಕ ಭಿನ್ನಮತಗಳಿಂದ ಸ್ವಯಂ ರಕ್ಷಿಸಿಕೊಳ್ಳುವುದಕ್ಕೆ ಸಾಧ್ಯವೇ, ಅಥವಾ ನಿಖರ ಸರಹದ್ದುಗಳನ್ನು ಅನುಷ್ಠಾನಕ್ಕೆ ತರಲು ಸಮರ್ಥವೇ, ಅಥವಾ ಅವರ ಸಂಸ್ಕೃತಿ ಸಂಪೂರ್ಣ ಏಕೀಕೃತ ಅಥವಾ ನಿರ್ದಿಷ್ಟವಾಗಿ ಪ್ರಾಚೀನವೇ ಎಂಬಿತ್ಯಾದಿ ಪ್ರಾಯೋಗಿಕ ಮಾನದಂಡಗಳ ಮೂಲಕ ರಾಷ್ಟ್ರಗಳನ್ನು ಸಮರ್ಥವಾಗಿ ನಿರ್ವಚಿಸುವುದು ಸಾಧ್ಯವಿಲ್ಲ.

ಹಕ್ಕು ಪ್ರತಿಪಾದನೆಯ ಮೇಲೆ ಅವಲಂಬಿತವಾಗಿರುವ ಮಾತಿನ ರೀತಿಯಲ್ಲಿ, ಯೋಚಿಸುವ ಮತ್ತು ಕಾರ್ಯನಿರ್ವಹಿಸುವ ಕ್ರಮದಲ್ಲಿ ರಾಷ್ಟ್ರಗಳು ಬಹುತೇಕ ರೂಪುಗೊಳ್ಳುತ್ತವೆ ಎಂದೇ ಭಾವಿಸಲಾಗುತ್ತದೆ. ಇದು ಸಂಘಟಿತ ಯೋಜನೆಗಳಿಗಾಗಿ, ಜನರನ್ನು ಮತ್ತು ಆಚರಣೆಗಳನ್ನು ಮೌಲ್ಯಮಾಪನ ಮಾಡಲು ಜನರನ್ನು ಹುರಿದುಂಬಿಸುತ್ತದೆ.

ಇಲ್ಲಿ ಪರಿಪೂರ್ಣ ಪಟ್ಟಿ ಎನ್ನುವುದಿಲ್ಲ: ನಾವು ಇಲ್ಲಿ ಸಾಮಾನ್ಯ ಸಂರಚನೆಗಳನ್ನು ಗುರುತಿಸುವ ಕೆಲಸವನ್ನಷ್ಟೇ ಮಾಡುತ್ತಿದ್ದೇವೆ ಹೊರತು ರಾಷ್ಟ್ರದ ನಿಖರ ನಿರ್ವಚನವನ್ನಲ್ಲ. ಇಲ್ಲಿ ಪಟ್ಟಿ ಮಾಡಿದ ಅಂಶಗಳು ಒಂದು `ಮಾದರಿ ಶೈಲಿ'ಯನ್ನು ಅಭಿವೃದ್ಧಿಪಡಿಸುವುದಕ್ಕೆ ನಮಗೆ ಸಹಾಯ ಮಾಡಬಹುದು: ಇದು ಪರಿಕಲ್ಪನೀಕರಣಕ್ಕೆ ಸಹಾಯಕ ಅಷ್ಟೇ ಹೊರತು ಕ್ರಿಯಾತ್ಮಕ ನಿರ್ವಚನ ಅಲ್ಲ ಅಥವಾ ಪ್ರಾಯೋಗಿಕ ಪರೀಕ್ಷಾರ್ಹ ವಿವರಣೆಯೂ ಅಲ್ಲ. ರಾಷ್ಟ್ರ ಎನ್ನುವ ಪದವನ್ನು ಸಂವೇದನಾತ್ಮಕವಾಗಿ ಮತ್ತು ಸಾಮಾನ್ಯವಾಗಿ ಅರ್ಥವಾಗುವ ಹಾಗೆ ಬಳಸಲಾಗುತ್ತದೆ. ಅದನ್ನು ಜನಸಂಖ್ಯೆಗೆ ಅನ್ವಯಿಸಿದಾಗ ಅದು ಪಟ್ಟಿಮಾಡಲಾದ ಲಕ್ಷಣಗಳನ್ನು ಪ್ರತಿಪಾದಿಸುತ್ತದೆ ಎನ್ನುವುದು ಅರ್ಥವಾಗುವ ವಿಚಾರವೇ ಆಗಿದೆ. ಅದರಲ್ಲಿ ಆರು, ಅಥವಾ ಏಳು, ಇಲ್ಲವೇ ಎಂಟು ಲಕ್ಷಣಗಳು ಅತ್ಯಂತ ಮುಖ್ಯವಾಗಿದ್ದು, ಅವು ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನವಾಗಿರುತ್ತವೆ. ರಾಷ್ಟ್ರಗಳ ಗುರುತಿಸುವಿಕೆ ರಾಷ್ಟ್ರತನದ `ತಿರುಳನ್ನು' ನಿಖರವಾಗಿಸುವುದರಲ್ಲಿ ಇರುವುದಿಲ್ಲ. ಬದಲಾಗಿ

ಲಡ್‌ವಿಗ್ ವಿಟ್‌ಜೆನ್‌ಸ್ಟೇನ್ (೧೯೫೩) ಹೇಳುವ ಹಾಗೆ 'ಕೌಟುಂಬಿಕ ಸಾಮ್ಯತೆ'ಯ ಮಾದರಿಯಲ್ಲಿದೆ. ಕೆಲವು ಮಕ್ಕಳಲ್ಲಿ ಕುಟುಂಬದ ಮೂಗು ಕಾಣಿಸಿಕೊಂಡು ದವಡೆ ಕಾಣಿಸದೇ ಇರಬಹುದು ಅಥವಾ ಪರಿವಾರದ ಲಕ್ಷಣವಾದ ಹಸಿರುಕಣ್ಣುಗಳು ಇದ್ದು, ದೀರ್ಘ ಹಣೆ ಇಲ್ಲದೇ ಇರಬಹುದು: ಇಲ್ಲಿ ಹೇಳಿರುವ ಲಕ್ಷಣಗಳು ಪರಿವಾರದ ಒಳಗೇ ಹಂಚಿಕೆಯಾಗಿ, ಕುಟುಂಬದ ಆಚೆಗಿನ ವ್ಯಕ್ತಿಗಳ ಲಕ್ಷಣದ ಜತೆಗೆ ತಾಳೆಯಾಗದೇ ಇರಬಹುದು. ಆದರೂ ನಾವು ಮಾದರಿಯನ್ನು ನೋಡಬಹುದಾಗಿದೆ. ಹೀಗೆ ರಾಷ್ಟ್ರೀಯ ಸಿದ್ಧಾಂತ ಎನ್ನುವುದು ಯಾವುದೇ ಒಂದು ಪರಿಸ್ಥಿತಿಯಲ್ಲಿ ಒಂದೋ ಅಥವಾ ಅದಕ್ಕಿಂತ ಹೆಚ್ಚೋ ಲಕ್ಷಣಗಳನ್ನು ತೋರಿಸದೇ ಇರಬಹುದು ಅಥವಾ ಇತರರ ಮೇಲೆ ಹೆಚ್ಚು ಅಥವಾ ಕಡಮೆ ಒತ್ತನ್ನು ಕೊಡಬಹುದು. ರಾಷ್ಟ್ರದ ಗುರುತಿಸುವಿಕೆ ಕಠಿಣ ನಿರ್ವಚನದ ಆಧಾರದ ಮೇಲೆ ಸಾಧ್ಯವಿಲ್ಲ. ಬದಲಾಗಿ ಈ ಮಾದರಿಯ ಆಧಾರದ ಮೇಲೆ ನಿಂತಿದೆ.

ಈ ಅರ್ಥದಲ್ಲಿ ರಾಷ್ಟ್ರೀಯತೆಗೆ ಮೂರು ಆಯಾಮಗಳಿವೆ. ಮೊದಲನೆಯದಾಗಿ, ರಾಷ್ಟ್ರೀಯತೆ ಎನ್ನುವ ವಾಗ್ವಾದ ಅಥವಾ ಸಂಕಥನ ಇದೆ: ಇದು ಸಾಂಸ್ಕೃತಿಕ ತಿಳಿವಳಿಕೆ ಮತ್ತು ವಾಗ್ರೂಪದ ಉತ್ಪನ್ನವಾಗಿದೆ. ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಗುರುತಿನ ವಿನ್ಯಾಸದ ಹಿನ್ನೆಲೆಯಲ್ಲಿ ತಮ್ಮ ಆಕಾಂಕ್ಷೆಗಳನ್ನು ಆಲೋಚಿಸುವುದಕ್ಕೆ ಮತ್ತು ರೂಪುಗೊಳಿಸುವುದಕ್ಕೆ ಜಗತ್ತಿನಾದ್ಯಂತ ಇರುವ ಜನರಿಗೆ ಮಾರ್ಗದರ್ಶನ ನೀಡುವ ಉತ್ಪನ್ನ ಇದು. ನಿರ್ದಿಷ್ಟ ನೆಲೆಯ ರಾಷ್ಟ್ರೀಯತೆಯ ಚಿಂತನೆ ಮತ್ತು ನಿರ್ದಿಷ್ಟ ಆವರಣ ಮತ್ತು ಪರಂಪರೆಗಳ ಭಾಷೆಯ ಉತ್ಪಾದನೆಗೆ ಪ್ರೇರಣೆ ಇದು ಒದಗಿಸುತ್ತದೆ. ಎರಡನೆಯದಾಗಿ, ರಾಷ್ಟ್ರೀಯತೆ ಎನ್ನುವ ಯೋಜನೆಯೊಂದಿರುತ್ತದೆ: ಸಾಮಾಜಿಕ ಚಳವಳಿಗಳು ಮತ್ತು ರಾಜ್ಯದ ಯೋಜನೆಗಳು, ಅವುಗಳ ಮೂಲಕ ಜನರು ತಾವು ಭಾವಿಸಿಕೊಳ್ಳುವ ರಾಷ್ಟ್ರಗಳ ಸಂಘಟಿತ ಆಸಕ್ತಿಗಳನ್ನು ಮುಂದೊತ್ತುವ ಪ್ರಯತ್ನ ಮಾಡುತ್ತಾ ಇರುತ್ತಾರೆ. ಸಾಮಾನ್ಯವಾಗಿ ಅವು ಕೆಲವು ಹೊಂದಾಣಿಕೆಗಳನ್ನು ಹೊಂದಿರುತ್ತವೆ. (ಅಥವಾ ಚಾರಿತ್ರಿಕ ಸರಣಿಗಳಲ್ಲಿ) ಪ್ರಸ್ತುತ ಆಡಳಿತದಲ್ಲಿ, ರಾಷ್ಟ್ರೀಯ ಸ್ವಾಯತ್ತತೆಯಲ್ಲಿ ಸ್ವಾತಂತ್ರ್ಯ ಮತ್ತು ಸ್ವ-ನಿರ್ಧಾರ, ಅಥವಾ ಸೀಮೆಗಳ ಸೇರ್ಪಡೆಯಲ್ಲಿ ಹೆಚ್ಚಿನ ಭಾಗವಹಿಸುವಿಕೆ ಇರುತ್ತದೆ. ಮೂರನೆಯದಾಗಿ, ರಾಷ್ಟ್ರೀಯತೆ ಎನ್ನುವುದು ಮೌಲ್ಯಮಾಪನದಂತೆ ಇರುತ್ತದೆ: ನಿರ್ದಿಷ್ಟ ರಾಷ್ಟ್ರವನ್ನು ಕುರಿತು ಮೇಲರಿಮೆ ಸಾಧಿಸುವ ರಾಜಕೀಯ ಮತ್ತು ಸಾಂಸ್ಕೃತಿಕ ಸಿದ್ಧಾಂತಗಳು; ಇವುಗಳು ಹೆಚ್ಚಾಗಿ ಚಳವಳಿಗಳು ಅಥವಾ ರಾಷ್ಟ್ರದ ಯೋಜನೆಗಳ ಜತೆಗೆ ಸಂಬಂಧ ಹೊಂದಿರುತ್ತವೆ, ಆದರೆ ಹಾಗಿರಬೇಕೆಂದೇನೂ ಇಲ್ಲ. ಈ ಮೂರನೆಯ ಅರ್ಥದಲ್ಲಿ ರಾಷ್ಟ್ರೀಯತೆಗೆ ನೈತಿಕ ಪ್ರಾಧಾನ್ಯವನ್ನು ಕಲ್ಪಿಸಿಕೊಡಲಾಗಿದೆ: ರಾಷ್ಟ್ರೀಯ ಸರಹದ್ದುಗಳು ಕಾಕತಾಳಿಯವಾಗಿ ಆಡಳಿತಾತ್ಮಕ ಸರಹದ್ದುಗಳೂ ಆಗಿರುತ್ತವೆ. ಉದಾಹರಣೆಗೆ ರಾಷ್ಟ್ರವೊಂದರ ಸದಸ್ಯರು ಅದರ ನೈತಿಕ ಮೌಲ್ಯಗಳನ್ನು ಪಾಲಿಸಬೇಕಾಗಿರುತ್ತದೆ ಇತ್ಯಾದಿ. ನೈತಿಕ ಪ್ರಾಧಾನ್ಯದ ಕೆಲವು

ಕ್ರಿಯೆಗಳ ಮೂಲಕ ರಾಷ್ಟ್ರೀಯತೆ ಎನ್ನುವುದು ಒಂದು ರಾಷ್ಟ್ರಕ್ಕೆ ಸಲ್ಲಿಸುವ ಅತ್ಯಧಿಕ ನಿಷ್ಠೆ ಎನ್ನುವ ವಿಚಾರದ ಜತೆಗೆ ಕೊಂಡಿ ಬೆಸೆಯುತ್ತದೆ- ಜನಾಂಗಿಕ ನಾಶದಲ್ಲೂ ಇದೇ ನಡೆಯುತ್ತದೆ, ರಾಷ್ಟ್ರೀಯತೆಯ ಶುದ್ಧೀಕರಣದ ಸಿದ್ಧಾಂತಗಳು ಮತ್ತು ವಿದೇಶಿಗಳ ಬಗೆಗೆ ಆಕ್ರಮಣಕಾರಿ ಮನೋಭಾವ ಇವೆಲ್ಲ ಅತಿನಿಷ್ಠೆಯ ಪರಿಣಾಮಗಳೇ ಆಗಿವೆ. ತನ್ನದೇ ಗುಂಪಿಗೆ ನಿಷ್ಠನಾಗಿರುವುದು ಎನ್ನುವುದಕ್ಕೆ ನಿಜವಾಗಿಯೂ ಪ್ರಾಚೀನ ಹಿನ್ನೆಲೆ ಇದೆ. ಚರಿತ್ರೆ ಪೂರ್ವದ ಸ್ಪಷ್ಟ ಹಕ್ಕುಸ್ಥಾಪನೆ ಇರುವ ರಾಷ್ಟ್ರೀಯತೆಯ ಒಂದು ಆಯಾಮ ಇದು. ಇದು ನೆನಪಿನಾಚೆನಿಂದಲೂ ಅಸ್ತಿತ್ವದಲ್ಲಿದೆ. ಮಾನವ ಚರಿತ್ರೆ ದಾಖಲಾಗುವುದಕ್ಕೂ ಮುನ್ನ ಇದರ ಅಸ್ತಿತ್ವ ಇದೆ. ಗುಂಪುಗಳು ಮತ್ತು ಗುಂಪು ನಿಷ್ಠೆ ಎನ್ನುವುದು ಅನೇಕ ರೂಪಗಳನ್ನು ಪಡೆಯಬಹುದಾಗಿದ್ದು ಕೆಲವೊಮ್ಮೆ ಮಾತ್ರ ರಾಷ್ಟ್ರೀಯತೆಯನ್ನು ತಮಗೆ ತಾವೇ ವಿವರಿಸಬಹುದು ಅಥವಾ ರಚಿಸಬಹುದು. ಒಬ್ಬ ತನ್ನ ಕುಟುಂಬಕ್ಕೆ ನಿಷ್ಠನಾಗಿರಬಹುದು- ರಾಷ್ಟ್ರೀಯತೆ ಅಥವಾ ನಗರನಿಷ್ಠೆಗಿಂತಲೂ- ನಗರವನ್ನು ರಾಷ್ಟ್ರದ ಭಾಗವಾಗಿ ಪರಿಗಣಿಸಲಿ ಅಥವಾ ಬಿಡಲಿ- ಇದು ಚರಿತ್ರೆಯಲ್ಲಿ ಅತ್ಯಂತ ಸಾಮಾನ್ಯವಾದ ನಿಷ್ಠೆ. ಹದಿನಾರನೆಯ ಶತಮಾನದಲ್ಲಿ ಫ್ಲಾರೆನ್ಸ್ ಬಗ್ಗೆ ಮ್ಯಾಕಿಯವೆಲ್ಲಿಯ ನಿಷ್ಠೆ ಎನ್ನುವುದು ರಾಷ್ಟ್ರೀಯತೆಯ ಚರಿತ್ರೆಯ ಒಂದು ಭಾಗವೇ ಆಗಿದೆ. ಯಾಕೆಂದರೆ, ಅದು ಅವರನ್ನು ಆಡಳಿತದ ಸ್ವಭಾವದ ಬಗ್ಗೆ, ರಾಜಕೀಯ ಆಡಳಿತದ ಬಗ್ಗೆ, ರಾಜಕೀಯ ಸಮುದಾಯಗಳ ವ್ಯಕ್ತಿ ಸದಸ್ಯರನ್ನು ಆಡಳಿತಗಾರರ ಜತೆಗೆ ಬೆಸೆಯುವ ಸಂಬಂಧವನ್ನು ಕುರಿತು ಹೆಚ್ಚಾಗಿ ಮತ್ತು ಪ್ರಭಾವಶಾಲಿಯಾಗಿ ಬರೆಯಲು ಪ್ರೇರೇಪಿಸಿತು. ಆದರೆ ಹದಿನಾರನೆಯ ಶತಮಾನದ ಫ್ಲಾರೆನ್ಸ್ ರಾಷ್ಟ್ರ ಆಗಿರಲಿಲ್ಲ. ಮ್ಯಾಕಿಯವೆಲ್ಲಿಗೆ ಅತ್ಯಂತ ನಿರ್ಧಾರಕವಾಗಿದ್ದ ವಿಶಾಲ 'ಇಟಲಿ'ಯ ಜತೆಗೆ ಫ್ಲಾರೆಂಟೈನ್ ಅಸ್ಮಿತೆಗೆ ಯಾವುದೇ ಸಂಬಂಧವೂ ಇದ್ದಿರಲಿಲ್ಲ ಅಥವಾ ಆತನ ಕಾಲದಲ್ಲಿ ಅದು ಸಂಪೂರ್ಣವಾಗಿ ಕಾರ್ಯಗತವಾಗಲೂ ಇಲ್ಲ. ಹತ್ತೊಂಬತ್ತನೆಯ ಶತಮಾನದ ವರೆಗೆ `ರಿಸಾರ್ಜಿಮೆಂಟೊ' ಅಂದರೆ ರಾಷ್ಟ್ರೀಯತೆಯ ಆಧಾರದಲ್ಲಿ ಎಲ್ಲ ಇಟ್ಯಾಲಿಯನ್ನರನ್ನು ಒಟ್ಟುಗೂಡಿಸಿ ಒಂದೇ ಆಡಳಿತದ ಅಡಿಗೆ ತರುವ ಆಲೋಚನೆಯ ನಾಣ್ಯ ಚಲಾವಣೆಗೇ ಬಂದಿರಲಿಲ್ಲ. ಆಗಿನ್ನೂ ಈ ಸಿದ್ಧಾಂತವು ವಾಸ್ತವಕ್ಕೂ ಅತೀತವಾಗಿತ್ತು.

ಮಾಸ್ಸಿಮೋ ಡಿ ಅಝೆಗ್ಲಿಯೋ ಖೇದಿಸುವ ಹಾಗೆ: 'ನಾವು ಇಟಲಿಯನ್ನು ನಿರ್ಮಿಸಿದ್ದೇವೆ, ಆದರೆ ಈಗ ಇಟ್ಯಾಲಿಯನ್ನರನ್ನು ನಿರ್ಮಿಸಬೇಕಾಗಿದೆ' (ಹೋಬ್ಸಾಬ್‌ವ್ಮ್ ೧೯೯೦: ೪೪).

ಆಂತರಿಕವಾಗಿ ದೇಶೀ ಆದ ರಾಷ್ಟ್ರೀಯತೆಯ ಗುರುತಿನ ಉತ್ತೇಜನವನ್ನೇ ಅಂತಹ ಕಾರ್ಯಕ್ರಮಗಳು ಸೂಚಿಸುತ್ತಾ ಇರುತ್ತವೆ. ಬಾಹ್ಯ ಭಿನ್ನತೆಗಳನ್ನು ಕುರಿತ ಅಭಿಪ್ರಾಯದ ಆಂತರಿಕ ಕನ್ನಡಿಯಾಗಿದೆ ಈ ಹೇಳಿಕೆ. ಪ್ರತಿಯೊಬ್ಬ ವ್ಯಕ್ತಿಗೂ ಅಗತ್ಯ ಅಸ್ಮಿತೆ ಇದೆ ಎನ್ನುವ ಭಾವನೆ- ಆಂತರಿಕವಾಗಿ ಏಕೀಕೃತ

ಮತ್ತು ಇತರರೆಲ್ಲರಿಗಿಂತ ಭಿನ್ನ- ಎನ್ನುವುದು ರಾಷ್ಟ್ರೀಯತೆಯ ಚರಿತ್ರೆಯಲ್ಲಿ ಮಹತ್ತ್ವದ ಎಳೆಯಾಗಿದೆ. ಅಂತಹ ಭಾವನೆ ಬಹಳ ಸುಲಭಕ್ಕೆ ದಮನಕಾರಿಯಾಗಿ ಪರಿಣಮಿಸಬಹುದು. ಅದು ರಾಷ್ಟ್ರದ ಸ್ವಾಯತ್ತ ಭಾಗಗಳಲ್ಲಿ ಬದುಕುವ ಜನರ ಮೇಲೆ 'ಜನಾಂಗೀಯ ಶುದ್ಧೀಕರಣ'ವನ್ನೋ ಮತ್ತು ಸರಿಯಾದ ಸಂಸ್ಕೃತಿ ಮತ್ತು ವರ್ತನೆಯನ್ನು ಉತ್ತೇಜಿಸುವ ಯೋಜನೆಗಳನ್ನೋ ಪ್ರಯೋಗಿಸುವ ಸಾಧ್ಯತೆ ಇದೆ. ಅಂತರ್‌ವ್ಯಕ್ತೀಯ ಏಕತೆಯ ಜಾಲ ಮತ್ತು ಒಂದೇ ರೀತಿ ಕಾಣಿಸುವ ವಿಶಾಲ ವಿಭಾಗಗಳ ಜನರಲ್ಲಿ ಏಕತೆಗೆ ಒತ್ತಾಯಿಸುವುದಕ್ಕೂ ವ್ಯತ್ಯಾಸ ಇದೆ.

೧೦೬೬ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದದ್ದು ಇದೇ. ನಾರ್ಮನ್ ಆಕ್ರಮಣಕಾರರ ಸಂದರ್ಭದಲ್ಲಿ ರಾಜ ಮತ್ತು ರಾಜಪರಿವಾರಕ್ಕೆ ನಿಷ್ಠೆ ತೋರಿಸುವುದು ಒಂದು ವಿಚಾರ. ಇನ್ನೊಂದು ವಿಚಾರ ಏನೆಂದರೆ, ಅದರ ಅನಂತರದ ವರ್ಷಗಳಲ್ಲಿ ಇಂಗ್ಲಿಷ್ ರಾಷ್ಟ್ರೀಯತೆಯನ್ನು ಪೋಷಿಸುವುದಕ್ಕಾಗಿ ಕ್ಯಾಮ್‌ಲೋಟ್ ಅನ್ನು ಪುರಾಣೀಕರಿಸಲಾಯಿತು. 'ನಾರ್ಮನ್ ಯೋಕ್' ಅನ್ನು ಭ್ರಾಮಕ ವರ್ಗ ಸಮಸ್ಯೆ ಎಂದು ಬಿಂಬಿಸಲಾಯಿತು ಮತ್ತು ಅಲ್ಲಿ ಯಾವತ್ತೂ ಇಂಗ್ಲೆಂಡ್ ಇರಲಿದೆ ಎಂದು ಘೋಷಿಸಲಾಯಿತು. ಅಮೂರ್ತ ವಿಭಾಗದ ಇಂಗ್ಲೆಂಡ್‌ಗೆ ತೋರುವ ನಿಷ್ಠೆಗೂ ತನ್ನದೇ ನಿಜವಾದ ನಿರ್ದಿಷ್ಟ ಸಂಗಾತಿಗಳಿಗೆ ತೋರುವ ನಿಷ್ಠೆಗೂ ವ್ಯತ್ಯಾಸವಿದೆ, ಅಂತರ್‌ವ್ಯಕ್ತೀಯ ಸಂಬಂಧಗಳ ಜಾಲವು ವ್ಯಕ್ತಿಯನ್ನು ಸ್ಥಳೀಯತೆಯಲ್ಲಿ ಗುರುತಿಸಿದರೆ, ರಾಷ್ಟ್ರ ವಿಭಾಗದ ಸದಸ್ಯತ್ವವು ವ್ಯಕ್ತಿಗಳನ್ನು ಸಂಕೀರ್ಣವಾದ ಹಾಗೂ ಜಾಗತಿಕವಾಗಿ ಭಾವೈಕ್ಯಗೊಂಡ ವಿಶ್ವದಲ್ಲಿ ಗುರುತಿಸುವಂತೆ ಮಾಡುತ್ತದೆ. ಇದನ್ನು ತೀರ ಹಗುರವಾಗಿ ನಿರಾಕರಿಸುವುದಕ್ಕೂ ಬರುವುದಿಲ್ಲ. ಅದೇ ಹೊತ್ತಿಗೆ, ಇದೊಂದು ಸಂಘರ್ಷಗಳ ಸ್ರೋತಸ್ಸು ಆಗಿರುತ್ತದೆ ಮತ್ತು ವೈಯಕ್ತಿಕ ಹಾಗೂ ಸಾಮೂಹಿಕ ದುಮ್ಮಾನಗಳ ಜತೆಗೆ ವ್ಯವಹರಿಸುವ ಬಹುತೇಕ ಸಮಸ್ಯಾತ್ಮಕ ದಾರಿಯೂ ಹೌದು.

ಮೊದಲ ಅಧ್ಯಾಯದಲ್ಲಿ ನಾವು ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಅರ್ಥವನ್ನು ಇನ್ನಷ್ಟು ಶೋಧಿಸಲಿದ್ದೇವೆ. ಇಲ್ಲಿ ಮುಖ್ಯ ಒತ್ತು ಇರುವುದು ಇಡಿಯ ಆಧುನಿಕ ಯುಗವನ್ನು ರೂಪಿಸಿದ `ವಾಗ್ವಾದಕ್ಕೆ ಸಂಬಂಧಿಸಿದ ರಚನೆ' ಕಡೆಗೆ ಮತ್ತು ವಿಭಿನ್ನ ಚಳವಳಿ ಮತ್ತು ಯೋಜನೆಗಳಿಗೆ ಸಾಮಾನ್ಯ ವಾಗ್ರೂಪ ಕಲ್ಪಿಸಿಕೊಡುವುದರ ಕಡೆಗೆ. ರಾಷ್ಟ್ರೀಯತೆಯ ಮೇಲಿನ ಸಾಹಿತ್ಯಗಳಲ್ಲಿರುವ ಚರ್ಚೆಗಳಲ್ಲಿ ಮಹತ್ತ್ವದ್ದು ಎಂದರೆ, ರಾಷ್ಟ್ರೀಯತೆಯನ್ನು ಕೇವಲ ಪ್ರಾಚೀನ ಜನಾಂಗಿಕ ಅಸ್ಮಿತೆಗಳ ಮುಂದುವರಿಕೆ ಎಂದು ಭಾವಿಸುವವರ ಮತ್ತು ರಾಷ್ಟ್ರೀಯತೆಯನ್ನು ಸ್ಪಷ್ಟವಾಗಿ ಆಧುನಿಕ ಎಂದು ಭಾವಿಸುವವರ ನಡುವಣ ಚರ್ಚೆಯೇ ಆಗಿದೆ. ರಾಷ್ಟ್ರೀಯತೆಯನ್ನು ಅನೇಕ ವಿವಿಧ ಆಯಾಮಗಳಲ್ಲಿ `ವಾಗ್ವಾದಕ್ಕೆ ಸಂಬಂಧಿಸಿದ ರಚನೆ' ಎಂದು ಮಂಡಿಸುವ ಮೂಲಕ, ನಾನು ಇಲ್ಲಿ ಕೆಲವು ಲಕ್ಷಣಗಳು ಇತರ ಲಕ್ಷಣಗಳಿಗಿಂತ ಹೆಚ್ಚು ಹಳೆಯದ್ದು ಎಂದು

ವಾದಿಸಬಲ್ಲೆ. ಈಗ ನಾವು ರಾಷ್ಟ್ರೀಯತೆ ಎಂದು ಗುರುತಿಸುವ ನಮೂನೆ ಏನಿದ್ದರೂ ಸುಸ್ಪಷ್ಟವಾಗಿಯೂ ಅದು ಆಧುನಿಕ ಯುಗದ್ದೇ ಆಗಿದೆ.

ರಾಷ್ಟ್ರೀಯತೆಯನ್ನು ಜನಾಂಗಗಳ ಜತೆಗೆ ತುಲನೆ ಮಾಡುವ ಮೂಲಕ ಈ ವಿಚಾರವನ್ನು ಎರಡನೆಯ ಅಧ್ಯಾಯವು ಇನ್ನಷ್ಟು ಅಭಿವೃದ್ಧಿಪಡಿಸಲಿದೆ. ಇದು ಸಂಬಂಧ ಎನ್ನುವುದು ಸಾಮಾಜಿಕ ಐಕ್ಯವನ್ನು ಮತ್ತು ಸಾಮೂಹಿಕ ಅಸ್ಮಿತೆಯನ್ನು ಸಾಧಿಸುವುದಕ್ಕೆ ಹೇಗೆ ಸಂಯೋಜನೆಯ (ಇಮ್ಯಾಜಿನಿಂಗ್ ಅಥವಾ ಕಲ್ಪಿತವಾಗುವ) ದಾರಿ ಎನ್ನುವುದನ್ನು ಕೂಡ ಹೋಲಿಸಿ ನೋಡಲಿದೆ. ವಿವಿಧ ರಾಷ್ಟ್ರೀಯತೆಗಳು ಜನಾಂಗಿಕತೆಯಿಂದಲೇ ತಮ್ಮ ವಸ್ತು ವಿಚಾರಗಳನ್ನು ಸೆಳೆದುಕೊಂಡಿದ್ದರೂ ಕೂಡ ಅದು ರಾಷ್ಟ್ರೀಯತೆಯ ವಾಗ್ವಾದದ ಮೂಲಕ ರೂಪಾಂತರಗೊಂಡಿರುತ್ತದೆ. ಹಾಗಂತ ಅದು ವಾಗ್ವಾದದ ಪೂರ್ಣ ವಿವರಣೆಯೂ ಆಗಿರುವುದಿಲ್ಲ ಅಥವಾ ನೈಜ ರಾಷ್ಟ್ರೀಯತೆಗಳ ನಮೂನೆಯೂ ಆಗಿರುವುದಿಲ್ಲ. ರಾಷ್ಟ್ರೀಯತೆ ಎನ್ನುವುದನ್ನು ಪರಂಪರೆಯಿಂದ ದಕ್ಕಿದ್ದು ಎಂದು ಅರ್ಥೈಸಬೇಕೆ ಅಥವಾ ಆವಿಷ್ಕರಿಸಿದ್ದು ಎಂದು ಭಾವಿಸಬೇಕೆ ಎನ್ನುವುದು ಅತ್ಯಂತ ಹತ್ತಿರದ ಪ್ರಶ್ನೆಯಾಗಿದೆ. ಅಥವಾ ಅದು ಪ್ರಾಕ್ ಚರಿತ್ರ ರೂಪದ್ದು ಎಂದು ಭಾವಿಸಬೇಕೆ ಅಥವಾ ರಚಿತ ಎಂದು ತಿಳಿದುಕೊಳ್ಳಬೇಕೆ- ರಾಷ್ಟ್ರೀಯತೆಗಳು ಚರಿತ್ರೆಯನ್ನು ಆವಾಹಿಸುವ (ಅಥವಾ ಕೆಲವೊಮ್ಮೆ ದುರುಪಯೋಗಪಡಿಸುವ) ದಾರಿಗಳನ್ನು ನಾವು ಹೇಗೆ ಭಾವಿಸಿಕೊಳ್ಳಬೇಕು? ಮೂರನೆಯ ಅಧ್ಯಾಯದಲ್ಲಿ ನಾವು ಈ ವಿಚಾರವನ್ನು ಪರಿಶೀಲಿಸುತ್ತೇವೆ. ಅಲ್ಲಿ ಸಾಹಿತ್ಯ ಅನಗತ್ಯ ವೈರುದ್ಧ್ಯದ ಆಯ್ಕೆಗಳನ್ನು ಪ್ರಸ್ತುತಪಡಿಸುತ್ತದೆ, ಅಂದರೆ ಮೂಲ ಎನ್ನುವುದು ರಚನೆಗೊಳ್ಳಬಹುದು ಮತ್ತು ತನ್ನ ಶಕ್ತಿ ಅಥವಾ ಮಹತ್ತ್ವವನ್ನು ಕಳೆದುಕೊಳ್ಳದೇ ನಿಜವಾಗಿಯೂ ಹೊಸದಾಗಿಯೇ ಇರಬಹುದು ಎನ್ನುವುದನ್ನು ಇಲ್ಲಿ ನಾನು ವಾದಿಸಬಲ್ಲೆ. ನಾಲ್ಕನೆಯ ಅಧ್ಯಾಯ ಆಧುನಿಕ ಆಡಳಿತದ ಉದಯದೊಂದಿಗೆ ಸಂಬಂಧ ಹೊಂದಿರುವ ಹೊಸ ಬಗೆಯ ರಾಜಕೀಯ ಸಮುದಾಯದ ರಚನೆಯಲ್ಲಿ ಹೇಗೆ ರಾಷ್ಟ್ರೀಯತೆ ಮೂಡಿಬರುತ್ತದೆ ಎನ್ನುವುದನ್ನು ಪರಿಶೋಧಿಸಲಿದೆ. ಐದನೆಯ ಅಧ್ಯಾಯವು ರಾಷ್ಟ್ರೀಯತೆಯಲ್ಲಿ ವಿಶ್ವಾತ್ಮಕ ಮತ್ತು ಪ್ರಾದೇಶಿಕ ವಿಷಯಗಳ ನಡುವಣ ತಲ್ಲಣಗಳನ್ನು ಕುರಿತು ಚರ್ಚಿಸುತ್ತದೆ. `ನಾಗರಿಕ' ಮತ್ತು ರಾಷ್ಟ್ರೀಯ ಸದಸ್ಯತ್ವದ ಜನಾಂಗಿಕ ಪರಿಕಲ್ಪನೆಗಳ ನಂಬಿಕೆಯ ನಡುವಣ ವೈದೃಶ್ಯಗಳನ್ನು ಕುರಿತು ಹೇಳಲಾಗುತ್ತದೆ. ಹೆಚ್ಚಿನ ವಿಶ್ವಾತ್ಮಕ ಮಾದರಿಗೆ ಸ್ಥಳೀಯವನ್ನು ಹೇಗೆ ಸಾಂಕೇತಿಕವಾಗಿ ರೂಪಾಂತರಿಸಲಾಗುತ್ತದೆ ಎನ್ನುವ ವಿಚಾರವನ್ನು ಚರ್ಚಿಸಲಾಗುತ್ತದೆ. ಆರನೆಯ ಅಧ್ಯಾಯದಲ್ಲಿ ರಾಷ್ಟ್ರೀಯತೆ ಮತ್ತು ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವ ಮತ್ತು ಆರ್ಥಿಕ ಜಗತೀಕರಣಗಳನ್ನು ಪರಿಗಣಿಸಲಾಗುತ್ತದೆ. `ಆಂತರಿಕ' ರಾಷ್ಟ್ರೀಯತೆಗಳು ಹೇಗೆ ರಾಷ್ಟ್ರಗಳು ಮತ್ತು ರಾಷ್ಟ್ರ ರಾಜ್ಯಗಳ ಜಗತ್ತನ್ನು ಅವಲಂಬಿಸಿದ ರೀತಿಗಳು ಮತ್ತು ಅಲ್ಲಿದ್ದು ರೂಪುಗೊಂಡ ರೀತಿಗಳನ್ನು ಪರಿಶೀಲಿಸಲಾಗುತ್ತದೆ.

ಒಳ್ಳೆಯದಕ್ಕೋ, ಕೆಟ್ಟದ್ದಕ್ಕೋ, ಈ ಪುಸ್ತಕ ರಾಷ್ಟ್ರೀಯತೆಯ ಸಿದ್ಧಾಂತದ ಸಮಗ್ರ ವಿಚಾರವನ್ನು ಮುಂದಿಡುವುದಿಲ್ಲ. ರಾಷ್ಟ್ರೀಯತೆ ಎನ್ನುವುದು ಒಂದೇ ಸಿದ್ಧಾಂತವನ್ನು ವಿವರಿಸುವುದಕ್ಕಾಗಿ ಅನೇಕ ವಿಭಿನ್ನ ವಿಚಾರಗಳನ್ನು ಮಾತನಾಡುವ ಒಂದು ವಾಗ್ರೂಪ-ರಾಷ್ಟ್ರೀಯತೆಯ ವಾಗ್ರೂಪದಿಂದ ಇಂತಹ ವಿಭಿನ್ನ ಚಳವಳಿಗಳು, ಸಾಂಸ್ಕೃತಿಕ ವಿನ್ಯಾಸಗಳು, ರಾಷ್ಟ್ರದ ನೀತಿಗಳು ಅಥವಾ ಇತರ ಯೋಜನೆಗಳು ರೂಪು ಪಡೆದುಕೊಳ್ಳುತ್ತವೆ.

ಇದರ ಅರ್ಥ ಸಿದ್ಧಾಂತ ಬೇಡವೆಂದೇನೂ ಅಲ್ಲ. ರಾಷ್ಟ್ರೀಯತೆಯನ್ನು ಅದರೆಲ್ಲ ಬಹುರೂಪದಲ್ಲಿ ಹಿಡಿದಿಡುವುದಕ್ಕೆ ಅರ್ಥೈಸುವುದಕ್ಕೆ ಬಹುಮುಖೀ ಸಿದ್ಧಾಂತಗಳ ಅಗತ್ಯವಿದೆ ಎಂದೇ ಇದರರ್ಥ. ರಾಷ್ಟ್ರೀಯ ಚಳವಳಿಗಳು ಏಕೆ ಅಲೆಗಳ ರೂಪದಲ್ಲಿ ಕಾಣಿಸುತ್ತವೆ ಎನ್ನುವ ಪ್ರಶ್ನೆಗೆ ಉತ್ತರಿಸಬೇಕಾದರೆ, ಅದೇ ಪ್ರಶ್ನೆಯಿಂದ ವಿಭಿನ್ನ ಸಿದ್ಧಾಂತಗಳ ಅಗತ್ಯ ಇದೆ. `ರಾಷ್ಟ್ರೀಯತಾ ಸಿದ್ಧಾಂತಗಳು ಯಾಕೆ ಲೈಂಗಿಕತೆ ಮತ್ತು ಪೌರುಷತೆಗಳನ್ನು ಆಧರಿಸಿಕೊಂಡಿವೆ?' ಇಂತಹ ಪ್ರಶ್ನೆಗಳಿಗೆ ಉತ್ತರಿಸಲು ಹೆಚ್ಚಿನ ಗ್ರಹಿಕೆ ಬೇಕಾಗುತ್ತದೆ- ಅದು ಆಂಶಿಕವಾಗಿ ಸೈದ್ಧಾಂತಿಕ ಮತ್ತು ಭಾಗಶಃ ಚಾರಿತ್ರಿಕವಾದದ್ದು. ಇದನ್ನು ಅರ್ಥೈಸುವುದಕ್ಕೆ `ವಾಗ್ವಾದಕ್ಕೆ ಸಂಬಂಧಿಸಿದ ರಚನೆ'ಯ ರಾಷ್ಟ್ರೀಯತೆ ಮತ್ತು ಆಧುನಿಕ ಜಗತ್ತಿನಲ್ಲಿ ಅದರ ರಾಚನಿಕ ಪ್ರಭಾವ ಮತ್ತು ಭಾವುಕ ಶಕ್ತಿ ಅಗತ್ಯ.